ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 26-29
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭಾರತದಲ್ಲಿ ಜಾತಿ ರಾಜಕಾರಣ : ಒಂದು ಅಧ್ಯಯನ

**ಶಿವಕುಮಾರ ಹೆಚ್.ಆರ್.**

ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

**Abstract:**

*ಭಾರತದಲ್ಲಿ ಜಾತಿ ರಾಜಕಾರಣವು ಪಕ್ಷ ರಾಜಕೀಯವನ್ನು ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ರಾಜಕೀಯಕ್ಕೆ ಜಾತಿ ಎಷ್ಟು ಬೇಕೋ ಹಾಗೆ ಜಾತಿಗೂ ರಾಜಕೀಯ ಬೇಕು. ಜಾತಿ ಗುಂಪುಗಳು ರಾಜಕೀಯವನ್ನು ತಮ್ಮ ಚಟುವಟಿಕೆಗಳ ಕ್ಷೇತ್ರವಾಗಿಸಿಕೊಂಡಿವೆ. ಜಾತಿ ಗುಂಪುಗಳು ತಮ್ಮ ಗುರುತನ್ನು ಪ್ರತಿಪಾದಿಸಲು ಮತ್ತು ಸ್ಥಾನಕ್ಕಾಗಿ ಶ್ರಮಿಸಲು ಅವಕಾಶವನ್ನು ಪಡೆಯುತ್ತವೆ. ಪ್ರಸಿದ್ಧ ಸಮಾಜಶಾಸ್ತ್ರಜ್ಞ ಎಂ.ಎನ್.ಶ್ರೀನಿವಾಸ್ 'ಪ್ರಬಲ ಜಾತಿ'ಯ ಪರಿಕಲ್ಪನೆಯನ್ನು ನೀಡಿದ್ದಾರೆ. ಪ್ರಬಲವಾದ ಜಾತಿಯು ಸಂಖ್ಯಾತ್ಮಕವಾಗಿ ಹಾಗೂ ಆರ್ಥಿಕವಾಗಿ ಪ್ರಾಬಲ್ಯ ಹೊಂದಿರುತ್ತದೆ, ಅದರ ಸಂಖ್ಯಾ ಪ್ರಾಧಾನ್ಯತೆಯಿಂದಾಗಿ ಅದು ರಾಜಕೀಯ ಅಧಿಕಾರವನ್ನು ಅನುಭವಿಸುತ್ತದೆ. ರಾಜಕಾರಣಿಗಳು ಚುನಾವಣೆಯ ಸಮಯದಲ್ಲಿ ಬಳಸಲು ಜಾತಿಯನ್ನು ಸೂಕ್ತ ಮತ್ತು ಅನುಕೂಲಕರ ಸಾಧನವೆಂದು ಕಂಡುಕೊಳ್ಳುತ್ತಾರೆ. ಭಾರತದ ರಾಜಕೀಯವನ್ನು ರಾಜಕೀಯ ಅಧಿಕಾರಕ್ಕಾಗಿ ಪ್ರಮುಖ ಜಾತಿ ಗುಂಪುಗಳ ನಡುವಿನ ಪೈಪೋಟಿಯ ದೃಷ್ಟಿಯಿಂದಲೂ ನೋಡಲಾಗಿದೆ. ಜಾತಿ ಮತ್ತು ಧರ್ಮ ರಾಷ್ಟ್ರ ರಾಜಕಾರಣವನ್ನು ವಿಭಾಗಿಸುತ್ತದೆ. ಪ್ರಸ್ತುತ ಲೇಖನದಲ್ಲಿ ಭಾರತದ ರಾಜಕಾರಣದಲ್ಲಿ ಜಾತಿ ಪಾತ್ರವನ್ನು ವಿಶ್ಲೇಷಿಸಲಾಗಿದೆ.*

**Keywords:** *ರಾಜಕಾರಣ, ಪ್ರಜಾಪ್ರಭುತ್ವ, ಜಾತಿ ಪ್ರಾಬಲ್ಯ, ಜಾತಿ ಮತ್ತು ಧರ್ಮ ರಾಜಕಾರಣ.*

## ಪೀಠಿಕೆ

ಭಾರತದ ರಾಜಕೀಯದಲ್ಲಿ ಧರ್ಮದಂತೆ, ಜಾತಿಯೂ ದೊಡ್ಡ ಪಾತ್ರವನ್ನು ವಹಿಸುತ್ತದೆ. ಆದರೆ ಈ ಅಂಶವು ವಾಸ್ತವವಾಗಿ ನಮ್ಮ ದೇಶಕ್ಕೆ ಸಾಕಷ್ಟು ವಿಶಿಷ್ಟವಾಗಿದೆ. ಜಗತ್ತಿನ ಬೇರೆಲ್ಲಿಯೂ ಕೂಡ ಭಾರತದಷ್ಟು ಜಾತಿ ಮತ್ತು ಜಾತೀಯತೆ ದೇಶದ ಸಮಾಜ ಮತ್ತು ರಾಜಕೀಯದಲ್ಲಿ ಆಳವಾಗಿ ಹುದುಗಿಲ್ಲ. ಪುರಾತನ ಕಾಲದಿಂದಲೂ ಚಾಲ್ತಿಯಲ್ಲಿರುವ ನಮ್ಮ ಜಾತಿ ವ್ಯವಸ್ಥೆಯು ತುಂಬಾ ಕಠಿಣ ಮತ್ತು ವ್ಯಾಪಕವಾಗಿದ್ದು ಅದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಕಷ್ಟಕರವಾಗಿದೆ. ನಗರೀಕರಣ ಮತ್ತು ಆಧುನೀಕರಣದಿಂದ ನಾವು ಪ್ರಗತಿ ಸಾಧಿಸಿದ್ದೇವೆ, ಆದರೆ ಜಾತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವಲ್ಲಿ ನಾವು ಯಶಸ್ವಿಯಾಗಲಿಲ್ಲ. ಹಳ್ಳಿಗಳು ಮತ್ತು ಪಟ್ಟಣಗಳಲ್ಲಿ ಜಾತಿ ವ್ಯವಸ್ಥೆಯು ಇನ್ನೂ ಚಾಲ್ತಿಯಲ್ಲಿದೆ. ನಗರ ಪ್ರದೇಶಗಳಲ್ಲಿಯೂ ಕೂಡ ಜಾತಿ ಎಂಬ ಪಿಡುಗು ಇಂದಿಗೂ ಕಾಡುತ್ತಿದೆ.

***Please cite this article as:*** ಶಿವಕುಮಾರ ಹೆಚ್.ಆರ್. (2023). ಭಾರತದಲ್ಲಿ ಜಾತಿ ರಾಜಕಾರಣ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 2(5), 26–29.

ಯಾವುದೇ ಒಂದು ಜಾತಿಯ ಜನರು ಸಮಾನವಾಗಿ ಮತ ಚಲಾಯಿಸುತ್ತಾರೆ ಎಂಬ ಅಂಶವನ್ನು ರಾಜಕೀಯ ಪಕ್ಷಗಳು ಬಳಸಿಕೊಳ್ಳುತ್ತವೆ. ಹಾಗಾಗಿ ರಾಜಕೀಯ ಪಕ್ಷಗಳು ಅಭ್ಯರ್ಥಿಯನ್ನು ಅರ್ಹತೆಗಿಂತ ಅವರ ಜಾತಿಯನ್ನು ಆಧರಿಸಿ ಆಯ್ಕೆ ಮಾಡುತ್ತಾರೆ. ಚುನಾವಣೆಯ ಸಮಯದಲ್ಲಿ ಯಾವ ಜಾತಿಯ ಜನಸಂಖ್ಯೆ ಹೆಚ್ಚಿರುತ್ತದೆಯೋ ಅದೇ ಜಾತಿಯ ಅಭ್ಯರ್ಥಿಯನ್ನು ಎಲ್ಲಾ ರಾಜಕೀಯ ಪಕ್ಷಗಳು ಕೂಡ ಚುನಾವಣೆಗೆ ಕಣಕ್ಕಿಳಿಸುತ್ತಾರೆ.

ನಮ್ಮ ದೇಶದಲ್ಲಿ ಜಾತಿಯ ಮೇಲೆ ರಾಜಕೀಯವೂ, ರಾಜಕೀಯದ ಮೇಲೆ ಜಾತಿಯೂ ಪ್ರಭಾವ ಬೀರುತ್ತದೆ. ರಾಜಕೀಯ ಕಾರಣಗಳಿಗಾಗಿ ಅನೇಕ ಸಣ್ಣ ಜಾತಿಗಳು ಮತ್ತು ಉಪಜಾತಿಗಳು ಒಂದಾಗುವುದು ಸಮಾಜದ ಪ್ರಮುಖ ಬದಲಾವಣೆಯಾಗಿದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಜಾತಿ–ಉಪಜಾತಿಗಳ ನಡುವೆಯೂ ಕೂಡ ಬಿರುಕುಂಟು ಮಾಡಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವ ಚಾಣಕ್ಷತೆ ಇಂದಿನ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಕಾಣಬಹುದಾಗಿದೆ. ಸಾಮಾನ್ಯವಾಗಿ ಹಿಂದುಳಿದ ಜಾತಿ ಗುಂಪುಗಳು ಅಥವಾ ಮುಂದುವರೆದ ಜಾತಿ ಎಂಬ ಟ್ಯಾಗ್‌ಗಳನ್ನು ರಾಜಕೀಯದಲ್ಲಿ ಬಳಸುವುದನ್ನು ಕಾಣಬಹುದಾಗಿದೆ.

ನಮ್ಮ ದೇಶವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರೂ ಸಹಾ ಅಸಮಾನತೆಯ ಸಮಾಜವನ್ನು ಕಿತ್ತೊಗೆಯುವ ಸಂಕಲ್ಪದ ಪ್ರಜಾಪ್ರಭುತ್ವ ಇನ್ನು ಉದಯವಾಗಿಲ್ಲ. ಸಂವಿಧಾನ ಜಾರಿಗೆ ಬಂದ ನಂತರ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ರಾಜಕೀಯ ಸಮಾನತೆ ದೊರೆಯಿತು. ಬಾಬಾ ಸಾಹೇಬ್ ಡಾ.ಬಿ.ಆರ್ ಅಂಬೇಡ್ಕರ್ ಹೇಳುವಂತೆ "ಒನ್ ಮ್ಯಾನ್, ಒನ್ ವೋಟ್, ಒನ್ ವ್ಯಾಲ್ಯೂ" ಎಂಬುದು ಜಾರಿಗೆ ಬಂದಿತು. ಆದರೆ ಸಾಮಾಜಿಕ ಹಾಗೂ ಆರ್ಥಿಕ ಪ್ರಜಾಪ್ರಭುತ್ವಗಳು ಇನ್ನೂ ಕನಸಾಗಿಯೇ ಉಳಿದಿವೆ ಪ್ರತಿ ಚುನಾವಣೆಗಳಲ್ಲೂ ಜಾತಿಯ ಜೊತೆಗೆ ಉಪಜಾತಿಗಳು ಬಹಳವಾಗಿ ಕ್ರಿಯಾಶೀಲತೆಯಲ್ಲಿ ತೊಡಗಿಸಿಕೊಳ್ಳುತ್ತವೆ.

ಪ್ರತಿಯೊಂದು ಜಾತಿಗಳು ತಮ್ಮ ತಮ್ಮ ಧಾರ್ಮಿಕ ನೆಲೆಗಳಾದ ಮಠ ಮಂದಿರ ಮಸೀದಿ ಚರ್ಚು ಮತ್ತು ಗುರು ದ್ವಾರಗಳ ಮೂಲಕ ತಮ್ಮ ತಮ್ಮ ಜಾತಿಗಳನ್ನು ಪ್ರಬಲಗೊಳಿಸುತ್ತಾ ರಾಜಕಾರಣವನ್ನು ಮತ್ತಷ್ಟು ಶಕ್ತಿಗಳಿಸುತ್ತಾ ಸಾಗುತ್ತಿದೆ ಇವುಗಳಿಗೆ ಬೆಂಬಲವಾಗಿ ಜಾತ್ಯತೀತ ರಾಷ್ಟ್ರದಲ್ಲಿ ಜಾತ್ಯತೀತ ಪಕ್ಷಗಳು ಮತ್ತು ಕೋಮುವಾದ ಪಕ್ಷಗಳು ನೇರವಾಗಿ ಅಥವಾ ಪರೋಕ್ಷವಾಗಿ ಸಹಕರಿಸುತ್ತಿವೆ. ರಾಜಕೀಯ ಪಕ್ಷಗಳು ಧಾರ್ಮಿಕ ಸಂಸ್ಥೆಗಳನ್ನು, ಧಾರ್ಮಿಕ ಸಂಸ್ಥೆಗಳು ರಾಜಕೀಯ ಪಕ್ಷಗಳನ್ನು ಅವಲಂಬಿಸಿಕೊಂಡಿರುವುದೇ ಶಕ್ತಿ ರಾಜಕಾರಣದ ಚಿಹ್ನೆಯಾಗಿದೆ.

ರಾಜಕೀಯ ಪಕ್ಷಗಳು ಅಧಿಕಾರ ಹಿಡಿಯುವುದೇ ಪರಮ ಗುರಿಯಾಗಿರುವುದರಿಂದ ಧಾರ್ಮಿಕ ಪರಮಪೂಜ್ಯರುಗಳನ್ನು ಅವಲಂಬಿಸಬೇಕಾಗಿರುತ್ತದೆ. ಪರಮಪೂಜ್ಯರು ತಮ್ಮ ಪ್ರಭಾವಗಳನ್ನು ಹೆಚ್ಚಿಸಿಕೊಳ್ಳಲಿಕ್ಕೆ ಹಾಗೂ ತಮ್ಮ ತಮ್ಮ ಜಾತಿಗಳನ್ನು ಹಿಡಿತದಲ್ಲಿ ಇಟ್ಟುಕೊಂಡು ಸಂರಕ್ಷಿಸುವುದಕ್ಕೆ ರಾಜಕಾರಣಗಳನ್ನು ಅವಲಂಬಿಸಿರುತ್ತಾರೆ. ಆದುದರಿಂದಲೇ ಶಕ್ತಿ ರಾಜಕಾರಣ ಜಾತಿ ವ್ಯವಸ್ಥೆಯನ್ನು ಮೀರಿ ಜಾತಿ ರಹಿತ ವ್ಯವಸ್ಥೆಯನ್ನು ಹುಟ್ಟುಹಾಕಲು ಸಾಧ್ಯವಾಗುತ್ತಿಲ್ಲ. ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದರಿಂದ ಹಿಡಿದು ಸರ್ಕಾರ ಸ್ಥಾಪನೆಯಾಗುವವರೆಗೂ ಜಾತಿ ಕೆಲಸ ಮಾಡುತ್ತಿರುತ್ತದೆ. ಸರ್ಕಾರ ರಚನೆಯಾದ ನಂತರ ಅದರ ಲಾಭವನ್ನು ಆಡಳಿತದ ಹೆಸರಿನಲ್ಲಿ ಹಂಚಿಕೊಳ್ಳಲು ಪುನಃ ಜಾತಿ ಚಟುವಟಿಕೆ ಗರಿಗೆದರಿಕೊಳ್ಳುತ್ತವೆ. ಇಂದು ಈ ರಾಜಕೀಯದ ಆಟ ಆಗೆಯೇ ಮುಂದುವರೆಯುತ್ತಾ ಸಾಗಿದೆ ಅದು ಎಷ್ಟರಮಟ್ಟಿಗೆ ಗೋಚರವಾಗುತ್ತದೆ ಎಂಬುದನ್ನು ಸಂಸತ್ತಿನ ಅಥವಾ ರಾಜ್ಯಗಳ ವಿಧಾನಸಭೆಯ ಕಲಾಪಗಳಲ್ಲಿ ನೋಡಬಹುದಾಗಿದೆ.

ಇಂದು ದಲಿತರು ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರುಗಳು ಸಾಕಷ್ಟು ಸಂಖ್ಯೆಯಲ್ಲಿ ಒಂದಾಗಿ ಮೇಲ್ಜಾತಿಯ ಕೈಯಲ್ಲಿರುವ ಅಧಿಕಾರವನ್ನು ಪಡೆಯುವ ಕಾರ್ಯಕ್ಕೆ ಚಾಲನೆ ನೀಡಿರುತ್ತಾರೆ. ಈ ಮೂಲಕ ಒಂದು ಹೊಸ ರಾಜಕೀಯ ಅಧ್ಯಾಯವನ್ನು ಪ್ರಾರಂಭಿಸುವುದಾಗಿದೆ. ಆದರೆ ಇದು ಅಷ್ಟು ಸುಲಭವಲ್ಲ. ಏಕೆಂದರೆ ರಾಜ್ಯದಿಂದ ರಾಜ್ಯಕ್ಕೆ ಜಾತಿಯ ಮಾದರಿಗಳು ಭಿನ್ನವಾಗಿರುತ್ತದೆ, ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ತಮ್ಮ ಮತ ಬ್ಯಾಂಕುಗಳನ್ನು ಬಹುಮಟ್ಟಿಗೆ ಜಾತಿ ಆಧಾರದ ಮೇಲೆ ಹೊಂದಿರುತ್ತವೆ. ಜಾತಿ ಆಧಾರಿತ ರಾಜಕೀಯ ಪಕ್ಷಗಳು ಹೆಚ್ಚಾಗುತ್ತಿರುವ ಕಾಲದಲ್ಲಿ ಭಾರತ ರಾಜಕಾರಣ ಜಾತಿಯ ರಾಜಕಾರಣವಾಗಿರುತ್ತದೆ ಕೆಲವರು ಇದನ್ನು ಅಲ್ಲಗಳೆಯಲು ಆದರೆ ವಾಸ್ತವವಾಗಿ ಜಾತಿಯು ಪ್ರಧಾನವಾಗಿ ಕೆಲಸ ಮಾಡುತ್ತಿರುತ್ತದೆ ಅದಕ್ಕಾಗಿ ಜಾತಿ ಭಾರತದ ರಾಜಕೀಯ ಸಮಾಜದ ಕೇಂದ್ರ ಬಿಂದುವಾಗಿದೆ.

ಜಾತಿಯ ಪ್ರಾಬಲ್ಯ ಕ್ಷೀಣಿಸಬೇಕಾಗಿರುವುದು ಪ್ರಜಾಪ್ರಭುತ್ವದ ಶ್ರೇಯಸ್ಸಿಗೆ ಅಗತ್ಯವಾಗಿದೆ ಆದರೆ ಇದನ್ನು ಹೇಗೆ ಸಾಧಿಸಬಹುದು ಎಂಬ ಪ್ರಶ್ನೆ ಬಹುಮುಖ್ಯವಾಗಿದೆ. ಭಾರತವು 17 ಲೋಕಸಭಾ ಮಹಾ ಚುನಾವಣೆಗಳನ್ನು ಕಂಡಿದೆ ಪ್ರತಿ ಚುನಾವಣೆಯಲ್ಲಿಯೂ ಹೊಸ ಹೊಸ ಪ್ರಯೋಗಗಳನ್ನು ರಾಷ್ಟ್ರದಲ್ಲಿ ನಡೆಸಲಾಗಿದೆ. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ತಮ್ಮ ಪ್ರಣಾಳಿಕೆಯಲ್ಲಿ ಅಭಿವೃದ್ಧಿಯ ಭರವಸೆಗಳನ್ನು ನೀಡುತ್ತವೆ. ಆದರೆ ಮತ ಸೆಳೆಯುವ ತಂತ್ರವಾಗಿರುತ್ತದೆ. ಬಂಡವಾಳಶಾಹಿಗಳು ರಾಜಕೀಯ ಪಕ್ಷಗಳ ಮೇಲೆ ಹಿಡಿತ ಸಾಧಿಸುವ ಸಲುವಾಗಿ ಜಾತಿ ರಾಜಕೀಯವನ್ನು ಬಲಿಷ್ಠ ಗೊಳಿಸುತ್ತಿವೆ. ಇಂತಹ ಪರಿಪಾಠಗಳು ಪ್ರತಿ ಚುನಾವಣೆಯಲ್ಲಿಯೂ ಸಾಬೀತಾಗಿದೆ. ರಾಷ್ಟ್ರಕ್ಕೆ ಇದರಿಂದ ಮುಕ್ತಿ ಸಿಗಬೇಕಾದರೆ ಜಾತಿರಹಿತ ರಾಜಕೀಯ ಸಮಾಜ ಸೃಷ್ಟಿಯಾಗಬೇಕಾಗಿದೆ. ಹೀಗೆ ಸೃಷ್ಟಿಯಾಗಬೇಕೆಂದರೆ ದಲಿತರು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರುಗಳು ಅಧಿಕಾರದ ವ್ಯವಸ್ಥೆಯಲ್ಲಿ ಹೆಚ್ಚು ಪಾಲುಗಳನ್ನು ಹೊಂದಿರಬೇಕಾಗಿರುತ್ತದೆ ಇದನ್ನೇ ಬಾಬಾ ಸಾಹೇಬ್ ಡಾ. ಬಿಆರ್ ಅಂಬೇಡ್ಕರ್ ಪ್ರತಿಪಾದಿಸಿದ್ದು. ಗಾಂಧೀಜಿ ಕೂಡ ಅಂತ್ಯಜರಿಗೆ (ಸಾಮಾಜಿಕ ಮುಖ್ಯವಾಹಿನಿಯಿಂದ ಹೊರಗಿರುವವರು) ಅಧಿಕಾರ ದೊರೆಯಬೇಕು ಎಂಬುದನ್ನು ಅಂಬೇಡ್ಕರ್‌ರವರ ಮೂಲಕ ಮನಗಂಡು ಅದನ್ನೆ ಪ್ರತಿಪಾದಿಸಿದರು.

ಈ ಮಾದರಿಯ ದಲಿತೇತರರಿಗೆ ಸಾಧ್ಯವಾಗಿಸಲು ಜಾತಿ ಮನಸ್ಸುಗಳಿಂದ ಬಹುದೊಡ್ಡ ತೊಡಕನ್ನು ಎದುರಿಸಬೇಕಿದೆ ಶತಶತಮಾನಗಳಿಂದ ಶಕ್ತಿರಾಜಕಾರಣದಲ್ಲಿ ಮುಂದಿರುವ ದಲಿತೇತರರು ಸುಲಭವಾಗಿ ಅಧಿಕಾರದಿಂದ ವಂಚಿತರಾಗುವುದಿಲ್ಲ ಹಾಗೂ ಅಧಿಕಾರವನ್ನು ಸರಿಯಾದ ರೀತಿಯಲ್ಲಿ ಹಂಚಿಕೆ ಮಾಡಿ ಅನುಭವಿಸುವ ಮನಸುಗಳು ಇರುವುದಿಲ್ಲ ಆದುದರಿಂದ ಅಹಿಂದ ಹೆಚ್ಚು ಅರ್ಥಪೂರ್ಣವಾಗಿ ತನ್ನ ಸಾಮಾಜಿಕ ಮನಸ್ಸುಗಳು ಇರುವುದಿಲ್ಲ.ಆದುದರಿಂದ ಅಹಿಂದ ಹೆಚ್ಚು ಅರ್ಥಪೂರ್ಣವಾಗಿ ತನ್ನ ಸಾಮಾಜಿಕ ನೆಲೆಯನ್ನು ವಿಸ್ತರಿಸಿ ರಾಜಕೀಯ ಸಮಾಜವನ್ನು ಸತ್ಯ ರಾಜಕಾರಣಕ್ಕಾಗಿ ಸೃಷ್ಟಿಸಬೇಕಾಗಿರುತ್ತದೆ ಇದಕ್ಕೆ ತಡೆಯೊಡ್ಡುವ ಶಕ್ತಿಗಳನ್ನು ಮೀರುವ ರಾಜಕೀಯ ಸಮಾಜ ಸೃಷ್ಟಿಯಾದಗ ಮಾತ್ರ ಇದು ಸಾಧ್ಯವಾಗುತ್ತದೆ. ಒಂದಂತೂ ಸತ್ಯ ಈ ಶಕ್ತಿ ರಾಜಕಾರಣವೂ ಪ್ರಸ್ತುತ ಪ್ರಾರಂಭವಾಗಿದೆ.

ಇಂತಹ ಪ್ರಯತ್ನಗಳ ಜವಾಬ್ದಾರಿ ಹೊತ್ತಿರುವ ಹಿರಿಯರು ಅಧಿಕಾರ ತ್ಯಾಗಕ್ಕೂ ಸಿದ್ಧರಿದ್ದು, ಶೋಷಿತ ಸಮುದಾಯಗಳ ಮತಬ್ಯಾಂಕನ್ನು ಸರಿಯಾಗಿ ಬಳಸಿಕೊಳ್ಳುವ ವಾತಾವರಣವನ್ನು ಸೃಷ್ಟಿ ಮಾಡಬೇಕು ಇಂತಹ ವಾತಾವರಣದ ಮೂಲಕ ಸಾಮಾಜಿಕ ನ್ಯಾಯದ ಅಧಿಕಾರ ಹಂಚಿಕೆಯಾಗುತ್ತದೆ. ಇಂತಹ ಪ್ರಯತ್ನಗಳ ಮುರಿಯಲು ಜಾತಿ ಆಧಾರಿತ ರಾಜಕೀಯ ಪಕ್ಷಗಳೂ ಕೂಡ ಅಷ್ಟೇ ಬಲಿಷ್ಠವಾಗಿ

ಕಾರ್ಯತಂತ್ರಗಳನ್ನು ರೂಪಿಸುತ್ತವೆ. ಅದರ ಭಾಗವಾಗಿ ಮೀಸಲಾತಿ ಸದುಪಯೋಗವಾಗಿಲ್ಲ ಎಂಬ ಕಾರಣಕ್ಕಾಗಿ ಒಳಮೀಸಲಾತಿಯಿಂದ ಜಾತಿಗಳ ಒಗ್ಗಟ್ಟುಗಳನ್ನು ಮುರಿದು ಪ್ರಬಲ ಜಾತಿಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನಗಳು ಕೂಡ ನಡೆಯುತ್ತಿವೆ. ಪ್ರತಿಯೊಂದು ರಾಜಕೀಯ ಪಕ್ಷಗಳು ತಮ್ಮ ಆಡಳಿತದ ಅವಧಿಯಲ್ಲಿ ಆಯೋಗಗಳನ್ನು ಮಸೂದೆಗಳನ್ನು ಮತ್ತು ಆದೇಶಗಳನ್ನು ಮತಬ್ಯಾಂಕಿಗಾಗಿಯೇ ಸೃಷ್ಟಿಸುತ್ತಿವೆ. ಇಂತಹ ಬೆಳವಣಿಗೆಗಳು ಜಾತಿಗಳನ್ನು ಬಲಿಷ್ಠಗೊಳಿಸುವುದರ ಜೊತೆಗೆ ಉಪಜಾತಿಗಳ ಪ್ರಾಮುಖ್ಯತೆಯನ್ನು ಹೆಚ್ಚಿಸುತ್ತಿವೆ. ಹಿಂದುಳಿದ ವರ್ಗಗಳ ಆಯೋಗಗಳ ರೂಪುರೇಷೆಗಳನ್ನು ನೋಡಿದಾಗ ರಾಷ್ಟ್ರಮಟ್ಟದಿಂದ ರಾಜ್ಯಮಟ್ಟದವರೆಗೆ ಜಾತಿರಾಜಕಾರಣ ಹೇಗೆ ಸಾಗಿದೆ ಎಂಬುದು ಅರ್ಥವಾಗುತ್ತದೆ.

ಜಾತಿಗಳು ರಾಜಕಾರಣದಲ್ಲಿ ಬೇರೂರಿದರೂ ಜಾತ್ಯತೀತ ಮನೋಭಾವನೆ ಲಕ್ಷಣಗಳು ಹೊರಹೊಮ್ಮಿದಾಗ ಮಾತ್ರ ಕೋಮುವಾದದ ಜಾಗದಲ್ಲಿ ಜಾತ್ಯತೀತ ಪ್ರಜಾಪ್ರಭುತ್ವವನ್ನು ಸ್ಥಾಪಿಸಬಹುದಾಗಿದೆ. ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿಯೂ ಇಂತಹ ಪ್ರಯೋಗಗಳು ನಡೆದು ಭಾರತದ ಪ್ರಜಾಪ್ರಭುತ್ವಕ್ಕೆ ಹೊಸ ಆಯಾಮವನ್ನು ನೀಡಬೇಕಿದೆ.

**ಪರಾಮರ್ಶನ ಗ್ರಂಥಗಳು**


- ಅಂಶಿ ಪ್ರಸನ್ನಕುಮಾರ್. (2019). *ಸಮುದಾಯದ ನಾಯಕರು.* ರೂಪ ಪ್ರಕಾಶನ.
- ನಾಗಮೋಹನದಾಸ್ ಹೆಚ್. ಎನ್. (2022). *ಮೀಸಲಾತಿ ಭ್ರಮೆ ಮತ್ತು ವಾಸ್ತವ.* ಜನ ಪ್ರಕಾಶನ.
- ಶಶಿಕುಮಾರ್ ಡಿ. ಜೆ. *ಮೀಸಲು ಕ್ಷೇತ್ರಗಳ ರಾಜಕಾರಣ.* ಉಷಾ ಪ್ರಕಾಶನ.
- ಸುಖದೇವ್ ಥೋರಟ್. (2021). *ಜಾತಿ–ಸಾಮಾಜಿಕ ಪ್ರತ್ಯೇಕತೆ ಮತ್ತು ಬಡತನ* (ಅನು, ಬಿ.ಶ್ರೀಪಾದ). ಲಡಾಯಿ ಪ್ರಕಾಶನ.
- Krishna, A. (2003). What Is Happening to Caste? A View from Some North Indian Villages. *The Journal of Asian Studies*, *62*(4), 1171–1193. https://doi.org/10.2307/3591763
- Panini, M. N. (2023, October 24). Where politics of caste goes wrong. *The Indian Express*. https://indianexpress.com/article/opinion/columns/casteism-social-justice-social-equality-caste-politics-8996657/
- Sen, R. (2012). The persistence of caste in Indian politics. *Pacific Affairs*, *85*(2), 363–369. https://doi.org/10.5509/2012852363
- Shreyash Singhal. (2023, January 19). Role of Caste In Indian Politics. *brain booster*. https://www.brainboosterarticles.com/post/role-of-caste-in-indian-politics